**ಸಾಕ್ಷಿಗೆ ದಿನಾಂಕ:19-06-2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ವಾದಿ ಪರ ಶ್ರೀ. SNM ವಕೀಲರಿಂದ ::**

ನಾನು ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸುತ್ತಿದ್ದು, ಪ್ರಮಾಣಪತ್ರದಲ್ಲಿ ಹೇಳಿರುವ ಸಂಗತಿಗಳೆಲ್ಲವೂ ಸತ್ಯವಾಗಿದೆ ಎಂದು ಪ್ರಮಾಣೀಕರಿಸುತ್ತೇನೆ. ಪ್ರಮಾಣಪತ್ರವನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

**:: ಪಾಟೀ ಸವಾಲು :: ಪ್ರತಿವಾದಿಗಳ ಪರ ಶ್ರೀ. TLP ವಕೀಲರಿಂದ ::**

ದಾವಾ ಶೆಡ್ಯೂಲ್ ಸ್ವತ್ತು ನಾರಾಣಪುರ ಗ್ರಾಮದ ಸರ್ವೇ ನಂಬರ್ 83 ಆಗಿದ್ದು ಅದರ ವಿಸ್ತೀರ್ಣ 20 ಗುಂಟೆ ಆಗಿರುತ್ತದೆ. ಅದರ ಚೆಕ್ಕುಬಂದಿ ಪೂರ್ವಕ್ಕೆ ಗೋವಿಂದಪ್ಪ ರವರ ಜಮೀನು, ಪಶ್ಚಿಮಕ್ಕೆ ರಾಜಮ್ಮ ರವರ ಜಮೀನು, ದಕ್ಷಿಣಕ್ಕೆ ನಮ್ಮ ಜಮೀನು ಮತ್ತು ಉತ್ತರಕ್ಕೆ ದಾಳಪ್ಪ ರವರ ಜಮೀನು ಇರುತ್ತದೆ. ದಾವಾ ಶೆಡ್ಯೂಲ್ ಸ್ವತ್ತಿನ ಪಹಣಿ ಯಾರ ಹೆಸರಿನಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತು ಯಾರಿಗೆ ಸೇರಿರುತ್ತದೆ ಎಂದು ನನಗೆ ಗೊತ್ತಿಲ್ಲ. ಆದರೆ ಸರ್ವೇ ನಂಬರ್ 83 ರಲ್ಲಿ ಸುಮಾರು 30 ವರ್ಷಗಳಿಂದ ವಾದಿಯು 20 ಗುಂಟೆ ಜಮೀನಿನ ಸ್ವಾಧೀನದಲ್ಲಿ ಇರುತ್ತಾರೆ. ನನ್ನ ಜಮೀನು ಸಹ ಸರ್ವೇ ನಂಬರ್ 83 ರಲ್ಲಿ ಇರುತ್ತದೆ.

ನನ್ನ ಮುಖ್ಯ ವಿಚಾರಣ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ವಾದಿಗೆ ಪ್ರತಿವಾದಿಗಳು ಮಾಡಿಕೊಟ್ಟಿರುತ್ತಾರೆ ಎಂದು ಹೇಳುತ್ತಿರುವ ಕರಾರು ಪತ್ರಕ್ಕೆ ನಾನು ಸಹಿ ಮಾಡಿರುವುದಿಲ್ಲ. ಆದರೆ ಅದರ ಬಗ್ಗೆ ತಿಳಿದುಕೊಂಡಿರುತ್ತೇನೆ. ನನಗೆ ಈ ದಾವೆಯ ಬಗ್ಗೆ ಬೇರೆ ವಿಚಾರಗಳು ತಿಳಿದಿರುವುದಿಲ್ಲ ಎಂದರೆ ಸರಿ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ. ತರೀಕೆರೆ

(ಸಂಚಾರಿ ನ್ಯಾಯಾಲಯ ಅಜ್ಜಂಪುರ)

ಸಾಕ್ಷಿಯ ಸಹಿ: